ಎಕ್ಸಿಕ್ಯೂಷನ್ ನಂ : 05-2012 ಓಡಬ್ಲು-3

ಸಾಕ್ಷಿಯನ್ನು ದಿನಾಂಕ: 15-07-2016 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು : ಶ್ರೀ ಎನ್ ವಿ ಹೆಚ್ ಪರ ವಕೀಲರಿಂದ

ನಾನು ಮತ್ತು ರವೀಂದ್ರ ಧವಳೆ ಹರಕತ್‌ದಾರರೆಂದರೆ ಸರಿ. ಈ ನ್ಯಾಯೂಲಯದ ಮುಂದೆ ನಾನು ನನ್ನ ಓಟರ್ ಐಡಿ ಕಾರ್ಡ ಕೊಟ್ಟಿದ್ದೇನೆ. ಪ್ರಮಾಣ ಪತ್ರದಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನಾನು ಇದುವರೆಗೆ ತಿಳಿಯಲು ಪ್ರಯತ್ನಪಟ್ಟಿಲ್ಲ. ರವೀಂದ್ರ ಧವಳೆ ರವರು ಕಲಘಟಗಿ ಹಾಗೂ ಸಿದ್ದನಭಾವಿ ಎರಡೂ ಕಡೆ ವಾಸ ಮಾಡುತ್ತಾರೆಂದರೆ ಸರಿ. ನನಗೆ ಬಾಷಲ್ ಮಿಷನ್ ಚರ್ಚ ಅಂದರೆ ಏನು ಅಂತ ತಿಳಿದಿರುತ್ತೇನೆ. ಬಾಷಲ್ ಮಿಷನ್ ಚರ್ಚ್‌ನ್ನು ವಾದಿಯರು ನೋಡಿಕೊಳ್ಳುತ್ತಿದ್ದರು ಅಂದರೆ ಸಾಕ್ಷಿಯು ರವೀಂದ್ರ ಧವಳೆ ಅವರ ತಂದೆ ಚರ್ಚನ ವ್ಯವಸ್ಥೆ ನೋಡುತ್ತಿದ್ದರು ಅಂತ ನುಡಿಯತ್ತಾರೆ. ಈ ದಾವೆಯು ಸರ್ವೆ ನಂ 16 ಮತ್ತು 22 ರ ಜಮೀನಿಗೆ ಸಂಬಂಧಪಟ್ಟಂತೆ ನಡೆಯುತ್ತಿದ್ದರು. ಸದರಿ ಆಸ್ತಿ ಉತಾರ ಪತ್ರವನ್ನು ನಾನು ನೋಡಿರುವುದಿಲ್ಲ. ನನ್ನ ಆಸ್ತಿಯ ಉತಾರ ಪತ್ರವನ್ನು ಈ ನ್ಯಾಯೂಲಯದ ಮುಂದೆ ಹಾಜರುಪಡಿಸಿದ್ದೇನೆ. ನಾನು ಸಿದ್ದನಭಾವಿ ನಿವಾಸಿಯೂ ಅಲ್ಲ ಹಾಗೂ ನನಗೆ ಅಲ್ಲಿ ಯೂವುದೇ ಜಮೀನು ಇಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮೊದಲಿನಿಂದಲೂ ರಾಮದುರ್ಗ ಕುಟುಂಬದವರೇ ನೋಡಿಕೊಳ್ಳುತ್ತಿದ್ದರು ಅಂದರೆ ಸರಿಯಲ್ಲ. ರಾಮದುರ್ಗ ಕುಟುಂಬದವರು ಸದರಿ ಹೊಲಕ್ಕೆ ಕಾಲಿಟ್ಟಿಲ್ಲ, ನಾವು ಅಲ್ಲಿ ದುಡಿದಿದ್ದೇವೆ, ಇವತ್ತಿನವರೆಗೂ ರವೀಂದ್ರ ಧವಳೆರವರೇ ನೋಡಿಕೊಳ್ಳುತ್ತಿದ್ದಾರೆ. ಡೇವಿಡ್ ರಾಮದುರ್ಗ ರವರಿಗೆ ಸುಮಾರು 82 ವಯಸ್ಸಾಗಿದೆ ಅಂದರೆ ಸರಿ. ಮತ್ತು ಅವರ ಕುಟುಂಬದವರು ಸಿದ್ದನಭಾವಿ ಖಾಯಂ ನಿವಾಸಿಗಳಾಗಿರುತ್ತಾರೆಂದರೆ ಸರಿ.

ಸ್ಯಾಮುವೆಲ್ ಧವಳೆ ರವರು ಅರ್ಜಿದಾರ ರವೀಂದ್ರ ಧವಳೆ ರವರ ತಂದೆ. ಸ್ಯಾಮುವೆಲ್ ಧವಳೆ ರವರು ಕಲಘಟಗಿ ನಿವಾಸಿ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅರ್ಜಿದಾರರ ತಾಯಿ ದವಾಖಾನೆ ತೆರೆದಿದ್ದರು ಹಾಗೂ ಅರ್ಜಿದಾರರ ತಂದೆ ಬಾವಿ ತೆಗೆಸುತ್ತಿದ್ದರು, ಅವರ ಬಳಿ ನಾವು ಕೆಲಸ ಮಾಡುತ್ತಿದ್ದೆವು. ನಾನು ಸಿದ್ದನಭಾವಿ ಮತ್ತು ಸುತ್ತಮುತ್ತ ಹಳ್ಳಿಗಳಲ್ಲಿ ಕೂಲಿ ಮಾಡುತ್ತೇನೆ ಅಂದರೆ ಸರಿ. ಸಿದ್ದನಭಾವಿ ಊರಲ್ಲಿ ಸುಮಾರು 7-8 ಮನೆಗಳು ಇವೆ ಅಂದರೆ ಸರಿ. ಯೂರ ಯೂರದ್ದು ಯೂವ ಸರ್ವೆ ನಂ ಅಂತ ನನಗೆ ಗೊತ್ತಿಲ್ಲ.

ಅರ್ಜಿದಾರ ರವೀಂದ್ರ ಧವಳೆ ರವರ ಕೋರಿಕೆ ಮೇರೆಗೆ ಈ ನ್ಯಾಯೂಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯಲು ಬಂದಿದ್ದೇನೆ ಅಂದರೆ ಸರಿಯಲ್ಲ. ರವೀಂದ್ರ ಧವಳೆ ರವರಿಗೆ ಈ ಆಸ್ತಿಯಲ್ಲಿ ಯೂವುದೇ ಹಕ್ಕು ಇಲ್ಲ ಅಂದರೆ ಸಾಕ್ಷಿಯು ನಾವು ನೋಡುತ್ತಿದ್ದಾಗಲಿಂದಲೂ ರವೀಂದ್ರ ಧವಳೆ ರವರೇ ಹಕ್ಕು ಹೊಂದಿರುತ್ತಾರೆ ಅಂತ ನುಡಿಯುತ್ತಾರೆ. ಸಿದ್ದನಭಾವಿ ಊರಿನಲ್ಲಿ ಕ್ರಿಸ್ತ ಕುಟೀರ ಕಟ್ಟಿದ್ದಾರೆಂದರೆ ಸರಿಯಲ್ಲ. ರವೀಂದ್ರ ಧವಳೆ ರವರ ತಾಯಿ ದವಾಖಾನೆ ತೆರೆದಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ರವೀಂದ್ರ ಧವಳೆ ರವರಿಗೂ ಏನೂ ಸಂಬಂಧ ಇಲ್ಲ ಅಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಅದೆ,

ಸಹಿ/-

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,